ಅಂಥ ಬದಲಾವಣೆಯನ್ನೇನೂ ಕಂಡಿರಲಿಲ್ಲ. ಹಿಂದೆ ಸತತವಾಗಿ ಮೂರು ವರ್ಷಗಳ ಕಾಲ ಅಲ್ಲಿ ಓಡಾಡಿದ್ದರೂ ಈಗ ತಾನು ವಾಸವಿದ್ದ ಜಾಗವನ್ನು ತಲುಪಲು ತಡಕಾಡಿದ್ದ. ಮೈನ್ ರೋಡಿನಲ್ಲಿದ್ದ ರಜಿಯಾ ಬೇಗಂಳ ಚಹದಂಗಡಿ ಹಾಗೆಯೇ ಇತ್ತು. ಹತ್ತಿರ ಹೋಗಿದ್ದ. ಸುಮಾರು ಅರವತ್ತು ವರ್ಷ ದಾಟಿದ ಹೆಂಗಸು ಟೀ ಬಸಿಯುತ್ತಿದ್ದಳು. ಥೇಟ್ ರಜಿಯಾ ಬೇಗಂ ತರಾನೇ ಇದ್ದಳು. ರಜಿಯಾ ಬೇಗಂ ಮಗಳು ಮಮ್ತಾಜ್ ಬೇಗಂ ಉರೂಫ್ ಮಧುಬಾಲ!

'ನೀನು ಮಧುಬಾಲ ಅಲ್ಲವಾ?' ಗುನ್ನಾಲಾಲ್ ನಗುತ್ತಾ ಕೇಳಿದ್ದ. ಮಮ್ತಾಜ್ ಬೇಗಂ ಸ್ವಲ್ಪ ಗಾಬರಿಗೊಂಡು ಗುನ್ನಾಲಾಲನನ್ನು ತದೇಕದೃಷ್ಟಿಯಿಂದ ನೋಡಿದ್ದಳು. ಏಕೆಂದರೆ ತನ್ನಜ್ಜಿ ರಜಿಯಾ ಬೇಗಂ ಬಿಟ್ಟರೆ ಬೇರೆ ಯಾರೂ ಆ ಹೆಸರಿನಿಂದ ಕರೆಯುತ್ತಿರಲಿಲ್ಲ. ಅವಳು ನೆನಪಿನ ಮಡಿಕೆಗಳನ್ನು ತಡಕಾಡಿದ್ದಳು. ಗುರುತು ಸಿಕ್ಕಿತ್ತು.

'ಓಹ್ ನಾನು ಚಿಕ್ಕವಳಿದ್ದಾಗ ನೀವು ಇಲ್ಲಿದ್ದಿರಿ. ಟೀ ಕುಡಿಯಲಿಕ್ಕೆ ಬರುತ್ತಿದ್ದಿರಿ. ನಮ್ಮಮ್ಮ ರಜಿಯಾ ಬೇಗಂ ಚಂದದ ಟೀ ಮಾಡುತ್ತಿದ್ದಳು. ನಾನೂ ನಮ್ಮಮ್ಮನ ಹಾಗೇ ಟೇಸ್ಟಿ ಚಹ ಮಾಡುತ್ತೇನೆ. ನೀವು ಊರಿಗೆ ಹೋಗಿ ಸೆಟ್ಲ್ ಆದಿರೇನು. ಏನು ಬಂದದ್ದು? ಯಾರನ್ನಾದರೂ ಕಾಣಲಿಕ್ಕುಂಟಾ?' ಒಂದೇ ಸಮನೆ ವಿಚಾರಿಸಿಕೊಂಡು ಗಾಜಿನ ಗ್ಲಾಸನ್ನು ಬಿಸಿನೀರಿನಲ್ಲಿ ತೊಳೆದು ಬಿಸಿಬಿಸಿ ಚಹ ಬಗ್ಗಿಸಿ ಕೊಟ್ಟಿದ್ದಳು. ರಜಿಯಾ ಬೇಗಂನೊಂದಿಗೆ ಮಾತನಾಡುತ್ತಿರುವಂತೆ ಅನ್ನಿಸಿತು ಗುನ್ನಾಲಾಲನಿಗೆ.

'ಎಲ್ಲಿ ನಿಮ್ಮಮ್ಮ?' ಕೇಳಿದ್ದ. ಟೀ ಬೇಡ ಅನ್ನಲು ಮನಸ್ಸಾಗಲಿಲ್ಲ ಗುನ್ನಾಲಾಲನಿಗೆ. ಟೀ ಕಪ್ಪನ್ನು ಬಾಯಿಗಿಟ್ಟುಕೊಂಡಿದ್ದ. ಅದೇ ಹಿಂದಿನ ಟೇಸ್ಟ್!

'ಎಲ್ಲಿಯ ಅಮ್ಮ? ಅವಳು ಸತ್ತು ಇಪ್ಪತ್ತು ವರ್ಷಗಳ ಮೇಲಾಯಿತು. ನಂಗೂ ಮದುವೆಯಾಯಿತು. ಗೊತ್ತಲ್ಲ ನಿಮಗೆ ಈ ಕೊಳಗೇರಿಯ ಸಂಬಂಧಗಳು. ನಾನು ಇಷ್ಟು ಸುಂದರಿಯಾಗಿದ್ದರೂ ನನ್ನ ಗಂಡ ಯಾರೋ ಗುಬಾಲ್ ಮುಂಡೆಯನ್ನು ಕರೆದುಕೊಂಡು ಪೂನಾಕ್ಕೆ ಓಡಿಹೋದ. ಅಮ್ಮನ ಈ ಗೂಡಂಗಡಿ ನನಗೆ ಬದುಕು ಕೊಟ್ಟಿತು. ಮಗಳು ಬುದ್ಧಿವಂತೆ ಸದ್ಯ! ಕಂಪ್ಯೂಟರ್ ಎಂಜಿನಿಯರ್. ಗಂಡನೊಂದಿಗೆ ಅಮೆರಿಕದಲ್ಲಿದ್ದಾಳೆ. ಎರಡು ವರ್ಷಗಳ ಹಿಂದೆ ಮಗಳ ಬಾಣಂತನಕ್ಕೆಂದು ನಾನೂ ನಾಲ್ಕು ತಿಂಗಳ ಕಾಲ ಅಮೆರಿಕಕ್ಕೆ ಹೋಗಿ ಬಂದೆ. ಏನೇ ಆದ್ರೂ ನಮ್ಮ ಧಾರಾವಿಲಿ ಸಿಗುವಂಥ ಮಜ ಎಲ್ಲೂ ಸಿಗಲ್ಲ ಬಿಡ್ರಿ' ಎಂದು ಗಿರಾಕಿಗಳಿಗೆ ಟೀ ಬಗ್ಗಿಸಿ ಕೊಡುತ್ತಲೇ ಹೇಳಿದ್ದಳು.

'ಆ ಕಡೆ ದೇಸಾಯಿ ಚಿಲ್ಲರೆ ಅಂಗಡಿ ಇತ್ತಲ್ಲ, ಈಗ್ಲೂ ಇದೆಯಾ?' ಕೇಳಿದ್ದ ಗುನ್ನಾಲಾಲ್.

ದೇಸಾಯಿಗೆ ಕ್ಯಾನ್ಸರ್ ಆಗಿ ನಮ್ಮಜ್ಜಿ ತೀರಿಕೊಂಡ ವರ್ಷವೇ ತೀರಿಹೋದ. ಅವನ ಹೆಂಡತಿ ಆರು ತಿಂಗಳ ಕಾಲ ಅಂಗಡಿ ನಡೆಸಿದ್ಲು. ಆಮೇಲೆ ಅಂಗಡಿನ ಸಸ್ತಾ ಬೆಲೆಗೆ ಮಾರಿ ಯಾರೋ ಗಾರೆ ಕೆಲಸದವನೊಂದಿಗೆ ಗೋವಂಡಿಗೆ ಓಡಿಹೋದಳಂತೆ. ಏಕೆ ದೇಸಾಯಿಗೇನಾದರೂ ಬಾಕಿ ಕೊಡಬೇಕಿತ್ತಾ ನೀವು?' ನಗುತ್ತಾ ಹೇಳಿದ್ದಳು. ಯಾರೋ ಎದೆಗೆ ಚೂರಿ ಹಾಕಿದಂತಾಗಿತ್ತು ಗುನ್ನಾಲಾಲನಿಗೆ. ಅವನು ಅಲ್ಲಿಂದ ತಾನು ರತನ್ ಸಿಂಗನೊಂದಿಗೆ ವಾಸವಿದ್ದ ರೂಮಿನ ಹತ್ತಿರ ಹೋಗಿದ್ದ. ಅಂದು ಹೇಗೆ ಚರಂಡಿ ನೀರು ಹರಿಯುತ್ತಿತ್ತೋ ಇವತ್ತೂ ಅದೇ ಚರಂಡಿ ನೀರು ಹರಿಯುತ್ತಿದೆ. ಮನೆಯ ಮುಂದೆ ಚರಂಡಿಯಲ್ಲಿ ಹೆಂಗಸೊಬ್ಬಳು ಬಟ್ಟೆ ಒಗೆಯುತ್ತಿದ್ದಳು. ಬಾಗಿಲಿನಲ್ಲಿ ಮಗುವೊಂದು ಆಡುತ್ತಿತ್ತು. ಆಕೆಯನ್ನು ಕುರಿತು ಗುನ್ನಾಲಾಲ್–

'ಇಲ್ಲಿ ರತನ್ ಸಿಂಗ್ ಅಂಥ ಒಬ್ಬರಿದ್ದರು' ಎಂದು ಕೇಳಿದ್ದ.

'ಹೌದ್ರಿ ನಾನವರ ಸೊಸೆ. ಅವರು ತುಂಬಾ ಹಿಂದೆಯೇ ತೀರಿಹೋದ್ರು. ಅವರಿಗೆ ಟಿಬಿ ಆಗಿತ್ತು. ಜೊತೆಗೆ ದಮ್ಮು ಇತ್ತು. ಅವರು ಸತ್ತ ನಂತರ ನಾವು ಇಲ್ಲಿಗೆ ಬಂದ್ವಿ. ನಮ್ಮ ಅತ್ತೆ ನನ್ನ ಮೈದುನನ ಜೊತೆ ಕೋಲಿವಾಡದಲ್ಲಿದ್ದಾರೆ. ಅವರೂ ಮೆತ್ತಗಾಗಿದ್ದಾರೆ. ಅಂದಹಾಗೆ ನೀವು?' ಆಕೆ ಎದ್ದು ನಿಂತು ಉತ್ತರಿಸಿದ್ದಳು. ಆ ಕ್ಷಣ ಗುನ್ನಾಲಾಲನಿಗೆ ಆ ಮನೆಯಲ್ಲಿ ಮೂರು ವರ್ಷಗಳ ಕಾಲ ತಾನು ಇದ್ದದ್ದು ನಿಜವೆ ಎಂಬ ಅನುಮಾನ ಹುಟ್ಟಿಕೊಂಡಿತ್ತು. ರತನ್ ಸಿಂಗನ ಸೊಸೆಗೆ ಉತ್ತರ ಹೇಳದೆ ಅಲ್ಲಿನ ಇನ್ನಿತರರ ಬಗ್ಗೆ ವಿಚಾರಿಸದೆ ಕೊಳಗೇರಿಯನ್ನು ದಾಟಿ ಮೈನ್ ರೋಡಿಗೆ ಬಂದು ಟ್ಯಾಕ್ಸಿ ಹತ್ತಿದವನು ತಾನು ಈ ಧಾರಾವಿಯಲ್ಲಿ ಹಿಂದೆ ವಾಸಿಸುತ್ತಿದ್ದದ್ದು ಸುಳ್ಳು ಎಂಬ ನಿರ್ಧಾರಕ್ಕೆ ಬಂದ. ತನ್ನ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಕೊಂಡು ಬಿಜಿಯಾಗಿಬಿಟ್ಟ.

ಗುನ್ನಾಲಾಲ್ ತರಹವೇ ಆಸ್ಕರ್ ವೈಲ್ಡನನ್ನೂ ಡಾಕ್ಟರ್ ಮನೋರಂಜನಿಯವರ ಮಾತುಗಳು ತೀವ್ರವಾಗಿ ಕಾಡತೊಡಗಿ ಏನೇನೋ ಆಲೋಚನೆಗಳಿಗೆ ಬಿದ್ದ. ತನಗೆ ಹದಿನೆಂಟು ವರ್ಷಗಳು ಕಂಪ್ಲೀಟ್ ಆಗಿದ್ದರೂ ಸರಿಯಾಗಿ ಮುಂಬಯಿಯನ್ನು ನೋಡಿಲ್ಲವಲ್ಲ. ಕೇವಲ ಮಿಡ್ಲ್ ಸ್ಕೂಲ್ ಓದುವ ಮಕ್ಕಳು ಕೂಡ ಬಸ್ಸು, ಟ್ರೈನುಗಳನ್ನು ಹತ್ತಿ ಎಲ್ಲಂದರಲ್ಲಿ ಮನಬಂದಂತೆ ಸುತ್ತುತ್ತಾರೆ. ತಾನು ಎಲ್ಲಿಗೆ ಹೋಗಬೇಕಾದರೂ ಮನೆಯ ಮುಂದೆಯೇ ಕಾರನ್ನು ಹತ್ತುತ್ತೇನೆ. ಮತ್ತು ನಿರ್ದಿಷ್ಟ ಜಾಗಕ್ಕೆ ಹೋಗಿ ಮತ್ತೆ ಮನೆಯ ಬಾಗಿಲಿನಲ್ಲಿಯೇ ಕಾರಿನಿಂದ ಇಳಿಯುತ್ತೇನೆ. ಆಲ್‌ಮೋಸ್ಟ್ ಈ ಏರಿಯಾದ ಎಲ್ಲ ಮನೆಯವರೂ ಅಷ್ಟೆ. ಮನೆ ಕೆಲಸಗಳಿಗೆ ಬರುವವರು, ತರಕಾರಿ ಮಾರುವವರು, ಮನೆಗಳ ತೋಟಗಾರಿಕೆ ಮಾಡುವವರು ಮಾತ್ರ ರಸ್ತೆಗಳಲ್ಲಿ ತಿರುಗಾಡುತ್ತಾರೆ. ತನ್ನ ಮನೆಯಲ್ಲಿ ಮನೆಗೆಲಸ ಮಾಡುವವರಿಗೆ, ಡ್ರೈವರ್‌ಗಳಿಗೆ, ಗಾರ್ಡನ್ ಮೈನ್‌ಟೇನ್ ಮಾಡುವವರಿಗೆ ಮತ್ತು ಸೆಕ್ಯುರಿಟಿಯವರಿಗೆ ಸಹ ಮನೆಯ ಕಾಂಪೌಂಡಿನಲ್ಲಿಯೇ ಕ್ವಾರ್ಟರ್ಸ್ ಸೌಲಭ್ಯವಿದೆ.

'ನಾಗ್ಪಾಡ್ ನೋಡಿದ್ದೀಯಾ?' ಡಾಕ್ಟರ್ ಮನೋರಂಜನಿಯವರ ಮಾತುಗಳು ಆಸ್ಕರ್ ವೈಲ್ಡನ ಮನದಲ್ಲಿ ಪ್ರತಿಧ್ವನಿಸಿದ್ದವು. ಅವನಿಗೆ ತಕ್ಷಣ ಮ್ಯಾಥ್ಯೂ ಅಲೆಗ್ಸಾಂಡರ್ ನೆನಪಾದ. ಅರಳು ಹುರಿದಂತೆ ಮಾತನಾಡುತ್ತಾ ತರಗತಿಯಲ್ಲಿ ಎಲ್ಲರ ಗಮನವನ್ನು ಸೆಳೆಯುತ್ತಿದ್ದ. ನೋಡಲು ಸುಂದರವಾಗಿದ್ದನಲ್ಲದೆ ಜಾಸ್ತಿ ಸ್ಟೈಲ್ ಮಾಡುತ್ತಿದ್ದ. ಆಸ್ಕರ್ ವೈಲ್ಡನನ್ನು ಹೆಚ್ಚಾಗಿ ಮಾತನಾಡಿಸಿಕೊಂಡು ಬರುತ್ತಿದ್ದ. ಅಲೆಗ್ಸಾಂಡರನನ್ನು ತರಗತಿಯಲ್ಲಿ ಇತರೆ ವಿದ್ಯಾರ್ಥಿಗಳು ಪೋಲಿ ಎಂದು ಮರೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರೂ ಅವನ ಸ್ನೇಹಕ್ಕೆ ಹಾತೊರೆಯುತ್ತಿದ್ದರು. ಮೂರ್ನಾಲ್ಕು ಮಂದಿ ಹುಡುಗಿಯರು ಅವನೊಂದಿಗೆ ಹೋಟೆಲ್, ಸಿನಿಮಾಗಳಿಗೆ ಹೋಗುತ್ತಾರೆಂದು ಗುಲ್ಲು ಎದ್ದಿತ್ತು. ಒಂದು ದಿನ ಅಲೆಗ್ಸಾಂಡರ್ ಆಗಿನ್ನೂ ಆಸ್ಕರ್ ವೈಲ್ಡ್ ಆಗಿರದಿದ್ದ ಸೋನಾಲಾಲನ ಪಕ್ಕ ಕುಳಿತು ಮೆಲ್ಲನೆ ಕಿವಿಯಲ್ಲಿ 'ಸೋನಾ ನೀನು ಸ್ವರ್ಗ ನೋಡಿದ್ದೀಯಾ?' ಎಂದು ಕೇಳಿದ್ದ. ಅವನ ಮಾತು ತಕ್ಷಣ ಸೋನಾಲಾಲನಿಗೆ ಅರ್ಥವಾಗಿರಲಿಲ್ಲ.

'ಇಲ್ಲ' ಎಂದಿದ್ದ ಸಹಜವಾಗಿ.

'ನೀನೆಂಥ ಶ್ರೀಮಂತನೊ? ನಾನು ಈಗಾಗಲೇ ಮೂರ್ನಾಲ್ಕು ಸಾರಿ ಸ್ವರ್ಗ ನೋಡಿದ್ದೀನಿ. ನೀನು ದೊಡ್ಡ ಶ್ರೀಮಂತನಾಗಿರೋದು ವೇಸ್ಟ್' ಎಂದು ರೇಗಿಸಿದ್ದ. ಇಷ್ಟೊತ್ತಿಗಾಗಲೇ ಸೋನಾಲಾಲ್ ಡ್ರಗ್ಸ್ ಕೇಸಲ್ಲಿ ಡಿಸಿಪಿ ಕೈಗೆ ಸಿಕ್ಕಿಹಾಕಿಕೊಂಡು ತಾತ ಗುನ್ನಾಲಾಲ್ ಬಂದು ಬಿಡಿಸಿಕೊಂಡಿದ್ದ. ಅದೇ ಅಲೆಗ್ಸಾಂಡರನ ಮಾತಿನ ಸ್ವರ್ಗ ಇರಬಹುದೆಂದು ಆ ವಿಷಯವನ್ನು ಅವನ ಬಳಿ ಬೇಕೆಂದೇ ಹೇಳಿಕೊಂಡಿರಲಿಲ್ಲ. ಹತ್ತನೆಯ ತರಗತಿಯ ಪ್ರಾರಂಭದಲ್ಲಿ ಒಂದು ದಿನ ಕ್ಲಾಸ್‌ಮೇಟ್ ಅಂಜಲಿ ದೇಸಾಯಿ ಐಸ್‌ಕ್ರೀಮ್ ಕೊಡಿಸಲು ಕೇಳಿದ್ದಳು. ಇಡೀ ಕ್ಲಾಸಿಗೆ ಅಂಜಲಿ ದೇಸಾಯಿ ಫೇರ್ ಆಗಿ ಇದ್ದಳಲ್ಲದೆ ತುಂಬಾ ಮಾತುಗಾತಿ ಕೂಡ ಆಗಿದ್ದಳು. ಬೇರೆಲ್ಲ ಹುಡುಗಿಯರಿಗಿಂತ ಹೆಚ್ಚಿನ ಪರ್ಸನಾಲಿಟಿ ಹೊಂದಿದ್ದಳು. ಅದಕ್ಕೆ ಕಾರಣ ಅವಳನ್ನು ಎರಡು ವರ್ಷ ತಡವಾಗಿಯೇ ಶಾಲೆಗೆ ಸೇರಿಸಲಾಗಿತ್ತು. ಹಾಗಾಗಿ ಅವಳು ಸೋನಾಲಾಲನಿಗೆ ಅಕ್ಕನಂತೆ ಕಾಣುತ್ತಿದ್ದಳು. ಸೋನಾಲಾಲ್ ಅವಳನ್ನು ಹೋಟೆಲೊಂದರ ಫ್ಯಾಮಿಲಿ ರೂಂಗೆ ಕರೆದುಕೊಂಡು ಹೋಗಿ ಅವಳಿಗೆ ಇಷ್ಟವಾದ ಐಸ್‌ಕ್ರೀಮ್ ಆರ್ಡರ್ ಮಾಡಿದ್ದ. ಪಕ್ಕದಲ್ಲಿಯೇ ಅಂಟಿಕೊಂಡು ಕುಳಿತಿದ್ದ ಅಂಜಲಿ ದೇಸಾಯಿ ಐಸ್‌ಕ್ರೀಮ್ ತಿನ್ನುತ್ತಾ ಏಕಾಏಕಿ ಸೋನಾಲಾಲನ ಮುಖವನ್ನು ತನ್ನ ಕಡೆಗೆ ಎಳೆದುಕೊಂಡು ತುಟಿಗಳನ್ನು ದೀರ್ಘವಾಗಿ ಚುಂಬಿಸಿದ್ದಳು. ಅಂಥ ಅನುಭವ ಸೋನಾಲಾಲನಿಗೆ ಆಗಿದ್ದದ್ದು ಅದೇ ಮೊದಲ ಬಾರಿ. ಮುಂಬಯಿಯ ವರ್ಲಿಯಲ್ಲಿ ಅಲ್ಲದೆ ಪುಣೆಯಲ್ಲೂ ಅಂಜಲಿ ದೇಸಾಯಿಯ ಅಪ್ಪನಿಗೆ ಫಾರ್ಮಸ್ಯುಟಿಕಲ್ ಫ್ಯಾಕ್ಟರಿಗಳಿದ್ದವು. ಮೂರ್ನಾಲ್ಕು ಸಾರಿ ಸೋನಾಲಾಲ್ ಮುಂಬಯಿಯ ಬೇರೆ ಐಸ್‌ಕ್ರೀಮ್ ಪಾರ್ಲರ್‌ಗಳಲ್ಲಿ ಅವಳಿಗೆ ಇಷ್ಟವಾದ ಐಸ್‌ಕ್ರೀಮ್ ಕೊಡಿಸಿ ಅವಳಿಂದ ಸಿಹಿಯಾದ ಮುತ್ತುಗಳನ್ನು ಪಡೆದುಕೊಂಡಿದ್ದ.

(ಸಶೇಷ)